ಆಗಸ್ಟ್ 10, 2007

## ಉದಾರೀಕೃತ ರವಾನೆ ಯೋಜನೆಯಡಿಯಲ್ಲಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು – ಭಾರತೀಯ ರಿಸರ್ವ್ ಬ್ಯಾಂಕಿನ ಪ್ರತಿಕ್ರಿಯೆ

ನಿವಾಸಿ ವ್ಯಕ್ತಿಗಳಿಗೆ ಲಭ್ಯವಿರುವ ವಿದೇಶಿ ವಿನಿಮಯ ಸೌಲಭ್ಯಗಳಿಗೆ ಮತ್ತಷ್ಟು ಸರಳತೆ ಮತ್ತು ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ಒಂದು ಹೆಜ್ಜೆಯಾಗಿ, ಭಾರತೀಯ ರಿಸರ್ವ್ ಬ್ಯಾಂಕು ಒಂದು ಉದಾರೀಕೃತ ರವಾನೆ (ಒಂದು ಯೋಜನೆ) ಯೋಜನೆಯನ್ನು ಫೆಬ್ರವರಿ 2004 ರಲ್ಲಿ ಪ್ರಕಟಿಸಿದೆ. ಈ ಯೋಜನೆಯನುಸಾರ ನಿವಾಸಿ ವ್ಯಕ್ತಿಗಳು ಪ್ರತಿ ಹಣಕಾಸು ವರ್ಷದಲ್ಲಿ ಒಂದು ಲಕ್ಷ ಅಮೇರಿಕನ್ ಡಾಲರ್‌ಗಳನ್ನು ಯಾವುದೇ ಅನುಮತಿಸಿದ ಬಂಡವಾಳದ ಹೂಡಿಕೆಗಾಗಲಿ ಅಥವಾ ಚಾಲ್ತಿ–ಖಾತೆ–ವ್ಯವಹಾರ ಸಂಬಂಧವಾಗಲಿ ರವಾನೆ ಮಾಡಬಹುದು. ಈ ಯೋಜನೆಯನ್ನು ಸುತ್ತೋಲೆ ಸಂಖ್ಯೆ ಎ.ಪಿ. (ಡಿ.ಐ.ಆರ್. ಶ್ರೇಣಿ) ಸಂಖ್ಯೆ 64 ದಿ. 4.2.2004ರ ಮೂಲಕ ಜಾರಿಗೆ ತರಲಾಗಿದೆ. ಅಧಿಕೃತ ವರ್ತಕ ಬ್ಯಾಂಕುಗಳ ಮತ್ತು ಭಾರತೀಯ ವಿದೇಶಿ ವಿನಿಮಯ ವರ್ತಕ ಸಂಘದ ಮೂಲಕ ಈ ಯೋಜನೆಯ ಬಗ್ಗೆ ಪ್ರತಿಸೂಚನೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕು ಸ್ವೀಕರಿಸಿದೆ ಹಾಗು ಚರ್ಚೆಗಳ ಆಧಾರದಮೇಲೆ ಯೋಜನೆಯ ಅನುಷ್ಠಾನದ ಬಗ್ಗೆ ನಾನಾ ವಿವಾದಗಳ ಸಂಬಂಧ ಸ್ಪಷ್ಟೀಕರಣಗಳನ್ನು ಈ ಕೆಳಗೆ ನೀಡಲಾಗಿದೆ.

### ಪ್ರಶ್ನೆ 1. ಮೇಲ್ಕಂಡ ಯೋಜನೆಯಡಿ ಅನುಮತಿಸಲಾದ ಬಂಡವಾಳ–ಖಾತೆ ವ್ಯವಹಾರಗಳ ಬಗ್ಗೆ ಒಂದು ಚಿತ್ರಣ ನೀಡಿ ?

ಅನುಮತಿಸಿದ ಯಾವುದೇ ಚಾಲ್ತಿ ಖಾತೆ ಅಥವಾ ಬಂಡವಾಳ ಖಾತೆ ವ್ಯವಹಾರಗಳಿಗೆ ಅಥವಾ ಎರಡಕ್ಕೂ ಅನ್ವಯಿಸುವಂತೆ ನಿವಾಸಿ ವ್ಯಕ್ತಿಗಳಿಗೆ ಈ ಯೋಜನೆಯಡಿಯಲ್ಲಿ ರವಾನೆ ಮಾಡುವುದಕ್ಕೆ ಅನುಮತಿ ನೀಡಾಲಾಗಿದೆ. ಈ ಯೋಜನೆಯಡಿಯಲ್ಲಿ ನಿವಾಸಿ ವ್ಯಕ್ತಿಗಳು ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿಯಿಲ್ಲದೆ ಭಾರತದಾಚೆ ಸ್ಥಿರಾಸ್ತಿಯ ಆರ್ಜನೆ ಮಾಡಿ ಸ್ವಾಧೀನದಲ್ಲಿಟ್ಟುಕೊಳ್ಳಬಹುದು ಅಥವಾ ಷೇರುಗಳು ಅಥವಾ ಋಣಪತ್ರಗಳನ್ನು ಅಥವಾ ಇತರೆ ಯಾವುದೇ ಆಸ್ತಿಗಳನ್ನು ಹೊಂದಬಹುದಾಗಿದೆ. ವ್ಯಕ್ತಿಗಳು ಭಾರತದಾಚೆಗಿನ ಬ್ಯಾಂಕುಗಳಲ್ಲಿ ವಿದೇಶಿ ಕರೆನ್ಸಿ ಖಾತೆಯನ್ನು ತೆರೆಯಬಹುದು, ನಿರ್ವಹಿಸಬಹುದು ಹಾಗು ಹೊಂದಬಹುದು. ಹೀಗಿದ್ದಾಗ್ಯೂ ಸಾಗರೋತ್ತರ ವಿನಿಮಯಗಳಿಗೆ/ಸಾಗರೋತ್ತರ ಎದುರು ಪಕ್ಷಕಾರರಿಗೆ ಮಾರ್ಜಿನ್‌ಗಳಿಗೆ ಅಥವಾ ಮಾರ್ಜಿನ್–ಕಾಲ್‌ಗಳಿಗೆ ಈ ಯೋಜನೆಯಡಿಯಲ್ಲಿ ಭಾರತದಿಂದ ರವಾನೆ ಮಾಡುವಂತಿಲ್ಲ. ಈ ಯೋಜನೆಯಡಿಯಲ್ಲಿ ಈ ಕೆಳಗಿನವುಗಳಿಗೆ ರವಾನೆ ಸೌಲಭ್ಯವಿರುವುದಿಲ್ಲ:

i. ಶೆಡ್ಯೂಲ್–I ರಲ್ಲಿ ಸ್ಪಷ್ಟವಾಗಿ ನಿಷೇಧಿಸಲ್ಪಟ್ಟ ಉದ್ದೇಶಗಳಿಗೆ ಎಂದರೆ ಲಾಟರಿ ಟಿಕೆಟ್‌ಗಳು/ಸ್ವೀಪ್ ಸ್ಟೇಕಗಳು ಅಥವಾ ನಿಷೇಧಿತ ನಿಯತಕಾಲಿಕ ಮುಂತಾದವುಗಳ ಖರೀದಿಗೆ ಅಥವಾ ವಿದೇಶಿ ವಿನಿಮಯ ನಿರ್ವಹಣೆ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು 2000 – ಇದರ ಶೆಡ್ಯೂಲ್–II ಅಡಿಯಲ್ಲಿ ನಿರ್ಬಂಧಿಸಿದ ಯಾವುದೇ ವಸ್ತುಗಳ ಖರೀದಿಯ ಸಂಬಂಧ ರವಾನೆಗಳು.

ii. ಭೂತಾನ್, ನೇಪಾಳ್, ಮಾರೀಶಿಯಸ್ ಅಥವಾ ಪಾಕಿಸ್ತಾನ್‌ಗೆ ನೇರ ಅಥವಾ ಪರೋಕ್ಷ ರವಾನೆಗಳು.

iii. ವಿತ್ತೀಯ ಕಾರ್ಯಪಡೆಯಿಂದ ಅಸಹಕಾರಿ ದೇಶಗಳು ಮತ್ತು ಗಡಿ ಭಾಗಗಳೆಂದು ಕಾಲಕಾಲಕ್ಕೆ ಗುರುತಿಸಲ್ಪಟ್ಟ ಯಾವುದೇ ದೇಶಗಳಿಗೆ ನೇರ ಅಥವಾ ಪರೋಕ್ಷ ರವಾನೆಗಳು.

iv. ಬ್ಯಾಂಕುಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪ್ರತ್ಯೇಕವಾಗಿ ಸೂಚಿಸಲ್ಪಟ್ಟ ಆತಂಕಕಾರಿ ಚಟುವಟಿಕೆಗಳನ್ನು ನಡೆಸುವ ಶಂಕಿತ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ನೇರ ಅಥವಾ ಪರೋಕ್ಷ ರವಾನೆಗಳು.

**ಪ್ರಶ್ನೆ 2. ಶೆಡ್ಯೂಲ್–III ರ ಕೆಳಗೆ ವಿವರಿಸಿರುವ ರವಾನೆಗಳಿಗೆ ಸಂಬಂಧಿಸಿದಂತೆ ಈಗಿರುವ ಸೌಲಭ್ಯಗಳ ಜೊತೆಗೆ ಇದು ಹೆಚ್ಚುವರಿ ಸೌಲಭ್ಯವಾಗಿದೆಯೇ ?**

ವಿದೇಶಿ ವಿನಿಮಯ ನಿರ್ವಹಣೆಗೆ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು 2000 – ಇದರ ಶೆಡ್ಯೂಲ್–III ರ ಕೆಳಗೆ ವಿವರಿಸಿರುವ ಖಾಸಗಿ ಪ್ರವಾಸ, ವ್ಯಾಪಾರ ಪ್ರವಾಸ, ಅಧ್ಯಯನ, ವೈದ್ಯಕೀಯ ಚಿಕಿತ್ಸೆ ಮುಂತಾದವುಗಳಿಗೆ ಈಗಾಗಲೆ ಲಭ್ಯವಿರುವ ಸೌಲಭ್ಯಗಳ ಜೊತೆಗೆ ಮೇಲ್ಕಂಡ ಸೌಲಭ್ಯವೂ ಹೆಚ್ಚುವರಿ ಸೌಲಭ್ಯವಾಗಿದೆ. ಈ ಸೌಲಭ್ಯವನ್ನು ಈ ಉದ್ದೇಶಗಳಿಗೂ ಉಪಯೋಗಿಸಿಕೊಳ್ಳಬಹುದಾಗಿದೆ. ಹೀಗಿದ್ದಾಗ್ಯೂ ಉಡುಗೊರೆ ಮತ್ತು ದೇಣಿಗೆ ರವಾನೆಗಳನ್ನು ಪ್ರತ್ಯೇಕವಾಗಿ ಮಾಡಬಾರದು ಮತ್ತು ಇವುಗಳನ್ನು ಈ ಯೋಜನೆಯಡಿಯಲ್ಲಿಯೇ ರವಾನೆ ಮಾಡಬೇಕು. ಇದರಂತೆ ನಿವಾಸಿ ವ್ಯಕ್ತಿಗಳು ಒಂದು ವಿತ್ತೀಯ ವರ್ಷಕ್ಕೆ ಒಂದು ಲಕ್ಷ ಅಮೇರಿಕನ್ ಡಾಲರ್‌ವರೆಗೆ ಉಡುಗೊರೆ ಹಾಗು ದೇಣಿಗೆ ರವಾನೆ ಮಾಡಬಹುದು.

**ಪ್ರಶ್ನೆ 3. ಈ ಯೋಜನೆಯಡಿಯಲ್ಲಿ ನಿವಾಸಿ ವ್ಯಕ್ತಿಗಳು ವಿದೇಶದಲ್ಲಿ ಹೂಡಿದ ಠೇವಣಿ ಅಥವಾ ಹೂಡಿಕೆಗಳ ಮೇಲೆ ಮೂಲ ಧನಕ್ಕೂ ಮೀರಿ ಕೂಡಿ ಬಂದ ಲಾಭಾಂಶವನ್ನು ಹಿಂದಕ್ಕೆ ತರಿಸಿಕೊಳ್ಳಬೇಕೆ ?**

ಈ ಯೋಜನೆಯಡಿಯಲ್ಲಿ ಹೂಡಿಕೆದಾರರು ಹೂಡಿಕೆಗಳಮೇಲೆ ಬಂದ ಆದಾಯವನ್ನು ತಮ್ಮಲ್ಲಿಯೇ ಇಟ್ಟುಕೊಳ್ಳಬಹುದು ಮತ್ತು ಹೂಡಿಕೆ ಮಾಡಬಹುದು. ಪ್ರಸ್ತುತ, ನಿವಾಸಿಗಳು ಈ ಯೋಜನೆಯಡಿಯಲ್ಲಿ ಹೂಡಿದ ಠೇವಣಿ ಹಾಗು ಹೂಡಿಕೆಗಳಿಂದ ಬಂದಂತಹ ಆದಾಯವನ್ನು ಹಿಂದಕ್ಕೆ ತರಿಸಿಕೊಳ್ಳಬೇಕಾಗಿಲ್ಲ.

**ಪ್ರಶ್ನೆ 4. ಈ ಯೋಜನೆಯಡಿಯಲ್ಲಿನ ರವಾನೆಗಳು ಒಟ್ಟು ಆಧಾರದ ಮೇಲಿರುವುದೋ ಅಥವಾ ನಿವ್ವಳ ಆಧಾರದ ಮೇಲಿರುವುದೋ ? (ವಿದೇಶದಿಂದ ವಾಪಸು ತರಿಸಿದ ನಿವ್ವಳ ಮಾತ್ರ)**

ಈ ಯೋಜನೆಯಡಿಯಲ್ಲಿನ ರವಾನೆಗಳು "ಒಟ್ಟು" ಆಧಾರದ ಮೇಲಿರುವವು.

**ಪ್ರಶ್ನೆ 5. ಅಪ್ರಾಪ್ತ ವಯಸ್ಕರೂ ರವಾನೆ ಸೌಲಬ್ಯವನ್ನು ಪಡೆಯಬಹುದೇ ?**

ಅಪ್ರಾಪ್ತ ವಯಸ್ಕರೂ ಸೇರಿದಂತೆ ಎಲ್ಲ ನಿವಾಸಿ ವ್ಯಕ್ತಿಗಳಿಗೂ ಈ ಸೌಲಭ್ಯ ದೊರಕುತ್ತದೆ.

**ಪ್ರಶ್ನೆ 6. ಕುಟುಂಬ ಸದಸ್ಯರಿಗೆ ಸಂಬಂಧಿಸಿದಂತೆ ಈ ಸೌಲಬ್ಯದಡಿಯ ರವಾನೆಗಳನ್ನು ಒಟ್ಟುಗೂಡಿಸಬಹುದೇ ?**

ಈ ಯೋಜನೆಯಡಿಯಲ್ಲಿನ ನಿಬಂಧನೆ ಹಾಗೂ ಷರತ್ತುಗಳನ್ನು, ವ್ಯಕ್ತಿಗತ ಕುಟುಂಬ–ಸದಸ್ಯರು ಪಾಲಿಸುವುದಕ್ಕೆ ಬದ್ಧರಾಗುವ ಸಂದರ್ಭದಲ್ಲಿ ಕುಟುಂಬ ಸದಸ್ಯರಿಗೆ ಸಂಬಂಧಿಸಿದಂತೆ ರವಾನೆಗಳನ್ನು ಒಟ್ಟುಗೂಡಿಸಬಹುದು.

**ಪ್ರಶ್ನೆ 7. ಕಲಾಕೃತಿ (ವರ್ಣ ಚಿತ್ರ ಮುಂತಾದವುಗಳು) ಗಳನ್ನು ನೇರವಾಗಿ ಅಥವಾ ಹರಾಜು–ಮನೆಯ ಮೂಲಕ ಖರೀದಿ ಮಾಡಲು ಈ ಯೋಜನೆಯನ್ನು ಉಪಯೋಗಿಸಬಹುದೇ ?**

ಕಲಾಕೃತಿಗಳ ಖರೀದಿಗೆ, ಭಾರತ ಸರಕಾರದ ಪ್ರಚಲಿತ ವಿದೇಶ ವ್ಯಾಪರ ನೀತಿಯ ರೀತಿಯಲ್ಲೇ ಇರುವ ಇತರ ಕಾನೂನಿನ ಷರತ್ತುಗಳನ್ನು ಪಾಲಿಸುವ ಬದ್ಧತೆಗೆ ಒಳಪಟ್ಟು, ಕಲಾಕೃತಿಗಳ ಖರೀದಿಗೆ ಯೋಜನೆಯಡಿಯಲ್ಲಿನ ರವಾನೆ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದು.

**ಪ್ರಶ್ನೆ 8. 5000 ಅಮೇರಿಕನ್ ಡಾಲರುಗಳ (ಉಡುಗೊರೆ, ದೇಣಿಗೆ ಮುಂತಾದವುಗಳು) ಸಣ್ಣ ಮೊತ್ತದ ರವಾನೆಗಳು, 1,00,000 ಅಮೇರಿಕನ್ ಡಾಲರುಗಳ ದೊಡ್ಡ ಮೊತ್ತದ ರವಾನೆ ಸೌಲಭ್ಯದ್ಕ ಜೊತೆಗೆ ಇದು ಹೆಚ್ಚುವರಿಯಾಗಿರುವ ಸೌಲಭ್ಯವೇ ?**

ಉಡುಗೊರೆ, ದೇಣಿಗೆಗಳಿಗೆ ರವಾನೆಗಳನ್ನು ಪ್ರತ್ಯೇಕವಾಗಿ ಮಾಡಲಾಗದು ಮತು್ತ ಯೋಜನೆಯಡಿಯಲ್ಲಿ ಮಾತ್ರ ಮಾಡತಕ್ಕದು. ಆದ್ದರಿಂದ ಉಡುಗೊರೆ ಹಾಗು ದೇಣಿಗೆಗಳಿಗೆ ಪ್ರತ್ಯೇಕವಾದ ಮಿತಿಯು ಲಭ್ಯವಿರುವುದಿಲ್ಲ.

**ಪ್ರಶ್ನೆ 9. ವ್ಯವಹಾರದ ಆದಾರದ ಮೇಲೆ ರವಾನೆಗಳನ್ನು ಅನುಮತಿಸಿವುದನ್ನು ಪರೀಶಿಲಿಸಲು ಅಧಿಕೃತ ವರ್ತಕರ ಅವಶ್ಯಕತೆಯಿದೆಯೇ ? ಅಥವಾ ರವಾನೆದಾರನ ಘೋಷಣೆಯ ಆಧಾರದ ಮೇಲೆ ರವಾನೆ ಮಾಡಬಹುದೇ ?**

ರವಾನೆದಾರನು ಘೋಷಿಸಿರುವ ವ್ಯವಹಾರ ಸ್ವರೂಪದಿಂದ ಅದಿಕೃತ ವರ್ತಕನು ಮಾರ್ಗದರ್ಶನ ಪಡೆಯುತ್ತಾನೆ ಮತ್ತು ರಿಸರ್ವ್ ಬ್ಯಾಂಕು ನೀಡಿದ ಸೂಚನೆಗಳಿಗೆ ಅನುಗುಣವಾಗಿ ರವಾನೆಗಳನ್ನು ಮಾಡಾಲಾಗುತಿ್ತದೆ ಎಂದು ಪ್ರಮಾಣೀಕರಿಸುತಾ್ತನೆ.

**ಪ್ರಶ್ನೆ 10. ಈ ಯೋಜನೆಡಿಯಲ್ಲಿ ಓಬ್ಬ ಗ್ರಾಹಕನು ನೌಕರರ ಭದ್ರತಾ ಪತ್ರ ಆಯ್ಕೆ ಯೋಜನೆಯನ್ನು (ESOPಗಳನ್ನು) ಆರ್ಜಿಸಲು ಹಣವನ್ನು ರವಾನೆ ಮಾಡಬಹುದೇ ?**

ನೌಕರರ ಭದ್ರತಾ ಪತ್ರ ಆಯ್ಕೆ ಯೋಜನೆಯನ್ನು (ಇ.ಎಸ್.ಓ.ಪಿ.ಗಳನ್ನು) ಅರ್ಜಿಸಲು ಹಣ ರವಾನೆ ಮಾಡುವುದಕ್ಕೆ ಈ ಯೋಜನೆಯನ್ನು ಬಳಸಬಹುದು.

**ಪ್ರಶ್ನೆ 11. ಅಮೇರಿಕನ್ ಡೆಪಾಸಿಟರಿ/ಗ್ಲೋಬಲ್ ಡೆಪಾಸಿಟರಿ ರಸೀಟುಗಳಿಗೆ (ಎಂದರೆ 5 ಕೆಲೆಂಡರ್ ವರ್ಷಗಳ ಒಂದು ಅವಧಿಗೆ 50,000 ಅಮೇರಿಕನ್ ಡಾಲರುಗಳು) ಸಂಬಂಧಿಸಿರುವ ಭದ್ರತಾ ಪತ್ರಗಳ ಆಯ್ಕೆ ಯೋಜನೆಯ ಜೊತೆಗೆ, ಈ ಯೋಜನೆಯು ಹೆಚ್ಚು್ವರಿ ಸೌಲಭ್ಯವಾಗಿದೆಯೆ ?**

ಈ ಯೋಜನೆಯಡಿಯ ರವಾನೆ ಸೌಲಭ್ಯವು ಎ.ಡಿ.ಆರ್ / ಜಿ.ಡಿ.ಆರ್ ಗಳಿಗೆ ಸಂಬಂಧವಿರುವ ನೌಕರರ ಭಧ್ರತಾ – ಆಯ್ಕೆ ಯೋಜನೆಯ (ಇ.ಎಸ್.ಓ.ಪಿ.ಗಳನ್ನು) ಜೊತೆಗೆ, ಒಂದು ಹೆಚ್ಚು್ವರಿ ಸೌಲಭ್ಯವಾಗಿರುತ್ತದೆ.

**ಪ್ರಶ್ನೆ 12. ಅರ್ಹತಾ ಷೇರುಗಳ ಆರ್ಜನೆ (ಎಂದರೆ ಸಾಗರೋತ್ತರ ಕಂಪನಿಯು ಪಾವತಿಸಿದ ಬಂಡವಾಳದ ಶೇ 1 ರಷ್ಟು ಅಥವಾ 20,000 ಅಮೇರಿಕನ್ ಡಾಲರುಗಳು, ಇವುಗಳಲ್ಲಿ ಯಾವುದು ಕಡಿಮೆಯೋ ಅದು)ಗೆ ಇರುವ ಸೌಲಭ್ಯಕ್ಕೆ ಇದು ಹೆಚ್ಚು್ವರಿಯಾಗಿದೆಯೇ ?**

ಈ ಯೋಜನೆಯಡಿಯಲ್ಲಿನ ಸೌಲಭ್ಯವು ಅರ್ಹತಾ ಷೇರುಗಳ ಆರ್ಜನೆಗೆ ಇರುವ ಸೌಲಭ್ಯಕ್ಕೆ ಹೆಚ್ಚುವರಿ ಸೇರ್ಪಡೆಯಾಗಿದೆ.

**ಪ್ರಶ್ನೆ 13. ನಿವಾಸಿ ವ್ಯಕ್ತಿಯು, ಈ ಯೋಜನೆಯಡಿಯಲ್ಲಿ ಮ್ಯೂಚುಯಲ್ ಫಂಡನ ಯುನಿಟ್ಟು್ಗಳಲ್ಲಿ, ವೆಂಚರ್ ಫಂಡಗಳಲ್ಲಿ, ದರ ನಿಗದಿಯಾಗದ ಭದ್ರತಾ ಪತ್ರಗಳಲ್ಲಿ, ವಚನ ಪತ್ರ (ಪ್ರೊಮಿಸರಿ ನೋಟ್)ಗಳಲ್ಲಿ ಹೂಡಿಕೆ ಮಾಡಬಹುದೇ ?**

ಒಬ್ಬ ನಿವಾಸಿ ವ್ಯಕ್ತಿಯು, ಈ ಯೋಜನೆಯಡಿಯಲ್ಲಿ ಮ್ಯೂಚುಯಲ್ ಫಂಡನ್ ಯುನಿಟ್ಟು್ಗಳಲ್ಲಿ, ವೆಂಚರ್ ಫಂಡಗಳಲ್ಲಿ, ದರ ನಿಗದಿಯಾಗದ ಭದ್ರತಾ ಪತ್ರ ಮುಂತಾದವುಗಳಲ್ಲಿ ಹೂಡಿಕೆ ಮಾಡಬಹುದು. ಈ ಯೋಜನೆಯಡಿ ವಿದೇಶದಲ್ಲಿ ತೆರೆಯಲಾಗಿರುವ ಖಾತೆಗಳ ಮೂಲಕ ಅಂತಹ ಭದ್ರತಾ ಪತ್ರಗಳಲ್ಲಿ ಹೂಡಿಕೆ ಮಾಡಬಹುದು.

**ಪ್ರಶ್ನೆ 14. ಒಬ್ಬ ವ್ಯಕ್ತಿಯು, ಅನಿವಾಸಿ ವ್ಯಕಿಯಾಗಿ ಸಾಲ ಪಡದುಕೊಂಡಿದ್ದು, ಭಾರತಕ್ಕೆ ಹಿಂತಿರುಗಿದ ಮೇಲೆ, ನಿವಾಸಿ ವ್ಯಕ್ತಿಯಾಗಿ, ಈ ಯೋಜನೆಯಡಿಯಲ್ಲಿ ಸಾಲ ಮರು ಪಾವತಿಸಬಹುದೇ ?**

ಹೌದು ಇದಕ್ಕೆ ಅವಕಾಶವಿದೆ.

**ಪ್ರಶ್ನೆ 15. ಈ ಯೋಜನೆಯಡಿಯಲ್ಲಿ ಹೊರ ರವಾನೆ ಮಾಡಲು ನಿವಾಸಿ ವ್ಯಕ್ತಿಗಳ ಪ್ಯಾನ್ ಸಂಖ್ಯೆಯನ್ನು ಹೊಂದಿರುವುದು ಕಡ್ಡಾಯವೇ ?**

ಹೌದು. ಪ್ಯಾನ್ ಸಂಖ್ಯೆ ಹೊಂದಿರುವುದು ಕಡ್ಡಾಯ.

**ಪ್ರಶ್ನೆ 16. ತನ್ನ ಖಾಸಗಿ ಪ್ರವಾಸದ ಕಾಲದಲ್ಲಿ ಒಬ್ಬ ನಿವಾಸಿ ವ್ಯಕ್ತಿಯು ಡಿಮ್ಯಾಂಡ್ ಡ್ರಾಫ್ಟ್ ನ ರೂಪದಲ್ಲಿ ಹೊರ ರವಾನೆ ಸೌಲಭ್ಯವನ್ನು (ತನ್ನ ಹೆಸರಿನಲ್ಲಿ ಅಥವಾ ಯಾರ ಮೂಲಕ ಅನುಮತಿಸಿದ ವ್ಯವಹಾರಗಳನ್ನು ನಡೆಸಲು ಬಯಸುವನೋ ಅವರ ಹೆಸರಿನಲ್ಲಿ) ಕೋರಿದರೆ, ಅದನ್ನು ರವಾನೆದಾರರ ಸ್ವಯಂ ಘೋಷಣೆಯ ಆಧಾರದ ಮೇಲೆ ಅಂತಹ ರವಾನೆಗಳನ್ನು ಮಾಡಬಹುದೇ ?**

ಈ ಯೋಜನೆಯಡಿ ನಿರ್ಧಿಷ್ಟಪಡಿಸಿದ ನಮೂನೆಯಲ್ಲಿ ಮಾಡಿದ ಸ್ವಯಂ ಘೋಷಣೆಯ ಆದಾರದ ಮೇಲೆ ಡಿಮ್ಯಾಂಡ್ ಡ್ರಾಫ್ಟ್ ಗಳ ಮೂಲಕ ಅಂತಹ ಹೊರ ರವಾನೆಗಳನ್ನು ಮಾಡಬಹುದು.

**ಅಲ್ಪನಾ ಕಿಲ್ಲಾವಾಲಾ**
**ಮುಖ್ಯ ಮಹಾ ವ್ಯವಸ್ಥಾಪಕರು**

**ಪತ್ರಿಕಾ ಪ್ರಕಟಣೆ : 2007–2008/229**